**ದಿನಾಂಕ: 20.03.2021 ರಂದು ಬೆಳಿಗ್ಗೆ 10-30ಕ್ಕೆ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್-178 (ಸಾರಕ್ಕಿ) ನಡೆದ ಸಭೆಯ ನಡಾವಳಿಗಳು:**

## : ಚರ್ಚೆಯಾದ ವಿಷಯಗಳು :

1. ವಾಡ್-178ರಲ್ಲಿನ ಸಾರ್ವಜನಿಕರ ಎಲ್ಲಾ ರೀತಿಯ ಕುಂದುಕೊರತೆಗಳ ಬಗ್ಗೆ, ಅಭಿವೃದ್ಧಿ ಕಾಮಗಾರಿಗಳು ಹಾಗೂ ಘನತ್ಯಾಜ್ಯ ನಿರ್ವಹಣೆ ಮತ್ತು ಕೊವಿಡ್-19ರ ಬಗ್ಗೆ ಚರ್ಚಿಸುವ ಕುರಿತು.
2. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸುವಂತಹ ಇತರೆ ವಿಷಯಗಳು.

## : ಸಭೆಗೆ ಹಾಜರಾಗಿದ್ದವರ ವಿವರಗಳು :

| | |
|---|---|
| **ಅಧ್ಯಕ್ಷರು** | ನೋಡಲ್ ಅಧಿಕಾರಿ |
| **ಸದಸ್ಯ ಕಾರ್ಯದರ್ಶಿ** | ವಾರ್ಡ್ 178ರ ಸಹಾಯಕ ಅಭಿಯಂತರರು |
| **ಸದಸ್ಯರುಗಳು** | ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು |
| **ಸದಸ್ಯರುಗಳು** | ಬಿಡಬ್ಲ್ಯೂಎಸ್ಎಸ್‌ಬಿ ಅಭಿಯಂತರರು |
| **ಸದಸ್ಯರುಗಳು** | ತೋಟಗಾರಿಕಾ ಅಧೀಕ್ಷಕರು (ದಕ್ಷಿಣ) |
| **ಸದಸ್ಯರುಗಳು** | ಸಹಾಯಕ ಅಭಿಯಂತರರು, (ಬೀದಿ ದೀಪ ನಿರ್ವಹಣೆಗಾರರು) |
| **ಸದಸ್ಯರುಗಳು** | ಬೆಸ್ಕಾಂ ಅಧಿಕಾರಿಗಳು |
| **ಸದಸ್ಯರುಗಳು** | ಅರಣ್ಯ ಇಲಾಖೆ ಅಧಿಕಾರಿಗಳು |
| **ಸದಸ್ಯರುಗಳು** | ಜೆ.ಪಿ.ನಗರ 2ನೇ ಹಂತ ನಾಗರೀಕ ಕಲ್ಯಾಣ ಸಂಘದ ಸದಸ್ಯರು ಹಾಗೂ ನಾಗರೀಕರು |

## :ನಡಾವಳಿಯ ವರದಿ:

- ಅಧ್ಯಕ್ಷರು ಮಾತನಾಡುತ್ತಾ ಹಿಂದಿನ ಸಭೆಯಲ್ಲಿ ಚರ್ಚೆಯಾದ ವಿಷಯಗಳ ಬಗ್ಗೆ ಅಧಿಕಾರಿಗಳು ಕೈಗೊಂಡ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

**ಸದರಿ ಸಭೆಯಲ್ಲಿ ಕಸ ವಿಲೇವಾರಿ ಸಮಸ್ಯೆ ಹಾಗೂ ಇತರೇ ದೂರುಗಳ ಬಗ್ಗೆ ಕುರಿತು ಈ ಕೆಳಕಂಡಂತೆ ಪ್ರಸ್ತಾಪಿಸಲಾಯಿತು.**

- ಮೊಬೈಲ್ ವಾಕ್ಸಿನೇಷನ್ ನಡೆಸಿಕೊಡುವಂತೆ ಆರೋಗ್ಯಾಧಿಕಾರಿಗಳಿಗೆ ಕೋರಲಾಯಿತು.
- ಧನ್ವಂತರಿ ಉದ್ಯಾನವನದಲ್ಲಿ ಯಾವ ಯಾವ ಔಷಧಿ ಸಸಿಗಳನ್ನು ನೆಟ್ಟಿರುವ ನಾಮಫಲಕವನ್ನು ಅಳವಡಿಸಲು ತೋಟಗಾರಿಕ ಅಧೀಕ್ಷಕರಿಗೆ ಸೂಚಿಸಲು ಕೋರಿದರು.
- ಧನ್ವಂತರಿ ಪಾರ್ಕಿನ ಸುತ್ತಮುತ್ತಲು ಪೊಲೀಸ್ ಬೀಟ್ ಮಾಡುವ ಬಗ್ಗೆ ಪೊಲೀಸರಿಗೆ ಸೂಚಿಸಲು ಕೋರಿದರು.
- ಧನ್ವಂತರಿ ಪಾರ್ಕಿನ ಉದ್ಯಾನವನದಲ್ಲಿರುವ ಶೌಚಾಲಯಕ್ಕೆ ಮೆಟ್ಟಿಲುಗಳನ್ನು ನಿರ್ಮಿಸುವಂತೆ ಕೋರಲಾಯಿತು.

***ಪು.ತಿ.ನೋ.***

- 15ನೇ ಅಡ್ಡರಸ್ತೆಯ ಸರ್ವೀಸ್ ರಸ್ತೆಗಳಿಗೆ ಡಾಂಬರೀಕರಣವನ್ನು ಮಾಡುವ ಬಗ್ಗೆ ಟ್ರಾಫಿಕ್ ಇಂಜಿನಿಯರಿಂಗ್ ಸೇಲ್ ರವರಿಗೆ ಸೂಚಿಸಲು ಕೋರಲಾಯಿತು.

- ಪ್ರತಿವಾರ ನಡೆಸುವ ವಾರ್ಡ್ ಸಮಿತಿ ಸಭೆಗೆ ಮಾರ್ಷಲ್‌ಗಳು ಗೈರು ಹಾಜರಾಗುವ ಬಗ್ಗೆ ಹಾಗೂ ಧನ್ವಂತರಿ ಪಾರ್ಕಿನಲ್ಲಿ ಬೆಳಗಿನ ಜಾವ ಮತ್ತು ಸಂಜೆ ವೇಳೆಯಲ್ಲಿ 1 ಗಂಟೆಗಳ ಕಾಲ ಮಾರ್ಷಲ್‌ಗಳು ಮಾಸ್ಕ್ ಹಾಕದೆ ಓಡಾಡವವರನ್ನು ಕಡ್ಡಾಯವಾಗಿ ಪರಿಶೀಲನೆ ಮಾಡುವಂತೆ ಕೋರಲಾಯಿತು.

- ಧನ್ವಂತರಿ ಪಾರ್ಕಿನಲ್ಲಿ ಸಾಂಸ್ಕೃತಿಕ, ಖಾಸಗಿ ಹಾಗೂ ಇತರೆ ಚಟುವಟಿಕೆಗಳಿಗೆ ಅವಕಾಶಗಳಿರುವುದಿಲ್ಲವೆಂದು ನಾಮಫಲಕವನ್ನು ಅಳವಡಿಸಲು ತೋಟಗಾರಿಕೆ ಅಧೀಕ್ಷಕರಿಗೆ ಸೂಚಿಸುವಂತೆ ಕೋರಲಾಯಿತು.

- ಪೊಲೀಸ್ ಇಲಾಖೆಯವರು ವಾರ್ಡ್ ಸಮಿತಿ ಸಭೆಗೆ ಗೈರು ಹಾಜರಾಗುವುದರಿಂದ ಅವರಿಗೆ ಪ್ರತಿ ಸಭೆಯಲ್ಲಿ ಹಾಜರಾಗುವಂತೆ ಸೂಚಿಸಲು ಕೋರಲಾಯಿತು.

- 14ನೇ ಮುಖ್ಯರಸ್ತೆ, ಜೆ.ಪಿ.ನಗರ 2ನೇ ಹಂತದಲ್ಲಿ ಬೃಹತ್ ನೀರುಗಾಲುವೆಯನ್ನು ಸ್ವಚ್ಛಗೊಳಿಸುವ ಕ್ರಮ ಕೈಗೊಳ್ಳಲು ಬೃಹತ್ ನೀರುಗಾಲುವೆ ವಿಭಾಗರವರಿಗೆ ಸೂಚಿಸಲಾಯಿತು.

- ಬ್ಲಾಕ್ ಸ್ಪಾಟ್ ಬ್ಯೂಟಿಫಿಕೇಶನ್ ಮಾಡಿರುವ ಸ್ಥಳದಲ್ಲಿ ಕಸವನ್ನು ಹಾಕಬಾರದೆಂದು ನಾಮಫಲಕವನ್ನು ಅಳವಡಿಸಲು ಕೋರಲಾಯಿತು.

- 21ನೇ ಮುಖ್ಯರಸ್ತೆಯಲ್ಲಿರುವ ಧನ್ವಂತರಿ ಉದ್ಯಾನವನದ ಗೇಟಿನ ಮುಂಭಾಗದಲ್ಲಿ ಸಿ.ಸಿ.ಟಿ.ವಿ. ಕ್ಯಾಮರಾವನ್ನು ಅಳವಡಿಸಲು ಯೋಜನೆ (ದಕ್ಷಿಣ) ರವರಿಗೆ ಸೂಚಿಸಲು ಕೋರಲಾಯಿತು.

- ಕೊನೆಯದಾಗಿ ಮಾನ್ಯ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಸಾರ್ವಜನಿಕರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆ ಪ್ರತಿ ತಿಂಗಳು ಮೊದಲ ಶನಿವಾರ ಹಾಗೂ ಮೂರನೇ ಶನಿವಾರ ಬೆಳಿಗ್ಗೆ 10.30 ಕ್ಕೆ ಇದೇ ರೀತಿಯಾಗಿ ಮಾಸಿಕ 2 ಬಾರಿ ವಾರ್ಡ್ ಸಮಿತಿ ಸಭೆ ನಡೆಯುವುದಾಗಿ ತಿಳಿಸಿ ಮುಂದಿನ ಸಭೆಗಳಿಗೆ ಈ ವಾರ್ಡಿನ ವ್ಯಾಪ್ತಿಗೆ ಬರುವ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸದರಿ ಸಭೆಗೆ ಮಾಹಿತಿಗಳೊಂದಿಗೆ ಹಾಜರಾಗುವಂತೆ ಕೋರಿ ಪತ್ರ ಬರೆಯಲು ಸದಸ್ಯ ಕಾರ್ಯದರ್ಶಿ ರವರಿಗೆ ಸೂಚಿಸಿದರು. ಹಾಗೂ ಗೈರು ಹಾಜರಾಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಮಾನ್ಯ ಆಯುಕ್ತರವರಿಗೆ ಸೂಚಿಸಲಾಗುವುದೆಂದು ತಿಳಿಸಿದರು.

- ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದ ಶ್ರೀ ರಾಮು .ಎಸ್, ವಾರ್ಡ್ 178 ಸಾರಕ್ಕಿ, ಸಭೆಗೆ ಹಾಜರಾದ ಎಲ್ಲಾ ಸದಸ್ಯರಿಗೂ ಹಾಗೂ ಅಧಿಕಾರಿಗಳು/ನೌಕರರಿಗೂ ವಂದನಾರ್ಪಣೆ ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಸದಸ್ಯ ಕಾರ್ಯದರ್ಶಿ | ಅಧ್ಯಕ್ಷರು |
| ಹಾಗೂ ಸಹಾಯಕ ಅಭಿಯಂತರರು | ವಾರ್ಡ್ ಸಮಿತಿ, ವಾರ್ಡ್ ನಂ. 178 |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |